**O. S. No: 20/2021**
**PW : 3**

(ಇಂದು ದಿನಾಂಕಃ **15-03-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ಆರ್ ಎಂ ಆರ್ ವಕೀಲರಿಂದ:**

ಕಬ್ಬಿನೂರು ಗ್ರಾಮದಿಂದ ಧಾರವಾಡ 38 ಕಿ. ಮೀ. ದೂರದಲ್ಲಿದೆ. ಕಬ್ಬಿನೂರು ಗ್ರಾಮದಿಂದ ಶಿರೂರು ಗ್ರಾಮ 7 ಕಿ. ಮೀ. ದೂರದಲ್ಲಿದೆ. ಶಿರೂರಿನಿಂದ ಧಾರವಾಡ 38 ಕಿ. ಮೀ. ಆಗುತ್ತದೆ. 3 ಹೊಲಗಳ ಮೇಲೆ ಮತ್ತು 1 ಮನೆಯ ಮೇಲೆ ದಾವಾ ಮಾಡಿದ್ದಾರೆ. ಸದರಿ ಮನೆ ಕಟ್ಟಿಗೆ ಮನೆಯಾಗಿರುತ್ತದೆ. ದಾವಾ ಆಸ್ತಿಗಳು ಯಾರ ಹೆಸರಿನ ಮೇಲೆ ಇದೆ ಎಂದು ನಾನೇನು ಪರಿಶೀಲನೆ ಮಾಡಿಲ್ಲ. ದಾವಾ ಸ್ವತ್ತುಗಳ ಸರ್ವೇ ನಂಬರಗಳು ಗೊತ್ತಿಲ್ಲ. ಆ ದಾವಾ ಆಸ್ತಿಗಳ ಉತಾರಗಳಲ್ಲಿ ಯಾರ ಯಾರ ಹೆಸರುಗಳಿವೆ ಎಂದು ಗೊತ್ತಿಲ್ಲ. ಬಸನಗೌಡ ರವರ ಮನೆಯಲ್ಲಿ ಹಿರಿಯರನ್ನು ಕೂಡಿಸಿದ್ದೇವು. ನಾನು, ಬಸನೌಡ ಮತ್ತು ಈರನಗೌಡರ ಮಾತುಕತೆಗೆ ಕುಳಿತಿದ್ದೇವು. ಯಾರ ಹೆಸರಿನಲ್ಲಿ ಆಸ್ತಿಗಳಿವೆ ಇದೆ ಎಂದು ಮಾತುಕತೆ ಆಗಲಿಲ್ಲ. ಸುಮಾರು 2 ವರ್ಷಗಳ ಮೇ ತಿಂಗಳಲ್ಲಿ ಹಿರಿಯರನ್ನು ಕೂಡಿಸಿದ್ದೇವು. ಶಿರೂರು ಗ್ರಾಮದ ಇಬ್ಬರೂ ಹಿರಿಯರು ಇದ್ದರು. ಆಗ ಸಂಜೆ 4 ಗಂಟೆಯಾಗಿತ್ತು.

2. 1 ನೇ ವಾದಿಯ ತಾಯಿ ತೀರಿ ಹೋಗಿ 6 ವರ್ಷ ವಾಗಿದೆ. ತನ್ನ ಪಾಲಿನ ಹಿಸ್ಸಾವನ್ನು ಅವರ ಮಕ್ಕಳು ಕೇಳಿದ್ದರು. ನನಗೆ ವಾದಿಯರ ಕುಟುಂಬದ ಬಗ್ಗೆ ಮಾಹಿತಿ ಇದೆ. ಬಸನಗೌಡನ ತಂದೆಯ ಹೆಸರು ಗೌಡಪ್ಪಗೌಡ ಮತ್ತು ತಾಯಿಯ ಹೆಸರು ಫಕೀರವ್ವ. ಗೌಡಪ್ಪಗೌಡರಿಗೆ 3 ಗಂಡು ಮತ್ತು 3 ಹೆಣ್ಣು ಮಕ್ಕಳು. ಅವರ ಹೆಸರುಗಳೆಂದರೆ ಮಡಿವಾಳ, ಫಕೀರಪ್ಪ ಮತ್ತು ಬಸನಗೌಡ. ನನಗೆ ಮಲ್ಲವ್ವ ಮತ್ತು ಮಹಾದೇವಿಯವರ ಪರಿಚಯವಿದೆ . ಅವರನ್ನು ಈ ದಾವೆಯಲ್ಲಿ ಸೇರಿಸಿದ್ದಾರೋ ಇಲ್ಲವೋ ಗೊತ್ತಿಲ್ಲ.

3. ನನಗೆ ವಾದಿಯವರೊಂದಿಗೆ ವಡನಾಟ ಚೆನ್ನಾಗಿದೆ. ಸರ್ವೇ ನಂಃ 43/1 ರ ಉತಾರದಲ್ಲಿ ಮೂಲ ಮಾಲೀಕರ ಹೆಸರು ಇದೆ. ನನಗೆ ಗೌಡಪ್ಪ ತಂದೆ ಬಸಪ್ಪ ಉರ್ಫ ಬಸನಗೌಡ ಮಲ್ಲನಗೌಡರ ಪರಿಚಯವಿದೆ. ಅವರು ಈಗ ಜೀವಂತ ಇದ್ದಾರೆ.

4. ನನಗೆ ದಾವಾ ಸ್ವತ್ತುಗಳ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ವಾದಿಯವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೇ. ಸರಿ. ಇದೆ .

Sd/-

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ

ನವಲಗುಂದ.